# ಆಹಾ ಸುದ್ದಿ!

★ ಸಸಿತೋಟ



ಫ್ರಾನ್ಸ್‌ನಲ್ಲಿ ಪ್ರಕೃತಿಯ ಜೊತೆ ಮನುಷ್ಯನನ್ನು ಬೆಸೆಯುವ ಕಾರ್ಯಕ್ರಮ ಶುರುವಾಗಿದೆಯಂತೆ. ಗಾಜಿನ ಚೂರಿನ ಮೇಲೆ, ಚೂಪಾದ ಜೆಲ್ಲಿ ಕಲ್ಲುಗಳ ಮೇಲೆ ಓಡಾಡುವುದು ಈ ಕಾರ್ಯಕ್ರಮದ ಒಂದು ಭಾಗವಂತೆ. ಹಾಗೆಯೇ ಚರಂಡಿ ನೀರಿನಲ್ಲಿ, ಕಸದ ರಾಶಿಯ ಮೇಲೆ ಓಡಾಡುವ ಕಾರ್ಯಕ್ರಮಕ್ಕೆ ಬೆಂಗಳೂರು ಪ್ರಶಸ್ತವಿರಬಹುದು.

ಜರ್ಮನಿಯ ಬರ್‌ಸ್ಟೆಸ್‌ಗೆಡೆನ್ ಎಂಬ ಪಟ್ಟಣ ವಾಸಿಸಲು, ಓಡಾಡಲಷ್ಟೇ ಅಲ್ಲ, ಸಾಯಲೂ ಅತ್ಯಂತ ಪ್ರಶಸ್ತವಂತೆ. ಅಲ್ಲಿಯ ಸ್ಮಶಾನದಲ್ಲಿ ಅದು ಹೇಗೋ ಖಾಲಿ ಜಾಗ ಗುರುತಿಸಿ 200 ಹೊಸ ಪ್ಲಾಟ್‌ಗಳನ್ನು ಮಾಡಿ ಮಾರಾಟಕ್ಕೆ ಲಾಟರಿ ಎತ್ತಲಾಗುವುದಂತೆ. ಖರೀದಿಸಲು ಜನ ಮುಗಿಬಿದ್ದಿದ್ದಾರಂತೆ, ಅಲ್ಲಿ ವಾಸಿಸಲು ಅಲ್ಲ, ಸತ್ತ ನಂತರ ಸಮಾಧಿ ಹೊಂದಲು.



ಅಭಿಷೇಕವೆಂದರೆ ಹಾಲು, ತುಪ್ಪ, ಸಕ್ಕರೆ, ಜೇನುತುಪ್ಪದ ಅಭಿಷೇಕ ನೆನಪಾಗಬಹುದು. ಆದರೆ ತಮಿಳುನಾಡಿನ ಮಾರಿಯಮ್ಮನ ದೇವಸ್ಥಾನವೊಂದರಲ್ಲಿ ಮೆಣಸಿನ ಅಭಿಷೇಕವನ್ನು ಹರಕೆ ಹೊತ್ತುಕೊಂಡ ಭಕ್ತರಿಗೆ ಮಾಡುತ್ತಾರಂತೆ. ವೈವಿಧ್ಯತೆ ಬೇಡವೇ!



ಅಮೆರಿಕದ ಫರ್ಮನ್ ಗಿನ್ನೆಸ್ ದಾಖಲೆಗಳಲ್ಲೇ ಈಜಾಡಿದವರು. ಸದ್ಯ ಹೊಟ್ಟೆಯ ಮೇಲೆ ಕಲ್ಲಂಗಡಿ ಹಣ್ಣು ಇಟ್ಟುಕೊಂಡು ಕತ್ತರಿಸುವ ದಾಖಲೆ ಮಾಡಿದ್ದಾರಂತೆ.

ಬೆಂಗಳೂರಿನ ರಸ್ತೆಯಲ್ಲಿ ಕಳೆದ ವಾರ ಇದ್ದಕ್ಕಿದ್ದಂತೆ ಯಮ ಪ್ರತ್ಯಕ್ಷನಾದ. ಹೆಲ್ಮೆಟ್ ಧರಿಸದಿದ್ದರೆ, ಸಂಚಾರ ನಿಯಮಗಳನ್ನು ಪಾಲಿಸದಿದ್ದರೆ ಯಮ ನಿಮ್ಮ ಬಳಿ ಬರುತ್ತಾನೆ ಎಂಬ ಸಂದೇಶವನ್ನು ಸಾರುವುದು ಪೊಲೀಸರ ಉದ್ದೇಶವಾಗಿತ್ತು. ಪೊಲೀಸರಿಗೇ ಹೆದರದವರು ಯಮನಿಗೆ ಹೆದರುತ್ತಾರೆಯೇ?



ತೆಳ್ಳಗೆ, ಬೆಳ್ಳಗೆ, ಎತ್ತರದ ಮೈಕಟ್ಟು.. ನಮ್ಮಲ್ಲಿ ವಧುಗಳ ಅನ್ವೇಷಣೆಗೆ ಇಂತಹ ಗುಣ ವಿಶೇಷಣಗಳು ಅವಶ್ಯಕ ಎಂಬ ಪಟ್ಟಿಯಲ್ಲಿ ಸೇರಿ ಬಿಟ್ಟಿವೆ. ಆದರೆ ದ.ಆಫ್ರಿಕಾದಲ್ಲಿ ದಪ್ಪಗೆ ಇರುವ ಹುಡುಗಿಯರಿಗೆ ಬೇಡಿಕೆ ಜಾಸ್ತಿಯಂತೆ. ಗುಂಡಗೆ ಬೆಳೆದಿರುವ ಹುಡುಗಿಯರಿಗೆ ಶೀಘ್ರ ವರ ಪ್ರಾಪ್ತಿ. ಡಯಟೀಷಿಯನ್ನಗಳು 'ತಿನ್ನಿ.. ಇನ್ನೂ ತಿನ್ನಿ' ಎಂದು ಉದ್ದನೆಯ ಬೇಕುಗಳ ಪಟ್ಟಿ ಕೊಡಬಹುದು.